ಮನೆಗಳ ಹಂಚಿಕೆ

1497(2591), ಶ್ರೀ ಮಂಜುನಾಥಗೌಡ ಕೆ.ಎಸ್.

ಅ) ಕಳೆದ 3 ವರ್ಷಗಳಿಂದ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಮತ್ತು ಹಂಚಿಕೆ ಮಾಡಿರುವ ಮನೆಗಳೆಷ್ಟು; (ಯೋಜನಾವಾರು, ವರ್ಷಾವಾರು ವಿವರ ನೀಡುವುದು)

ಆ) ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳ ನಿರ್ಮಾಣಕ್ಕೆ ತಗಲಿರುವ ವೆಚ್ಚ ಎಷ್ಟು;

ಇ) ಮನೆಗಳ ಹಂಚಿಕೆಗೆ ಅನುಸರಿಸುತ್ತಿರುವ ಮಾನದಂಡಗಳೇನು (ವಿವರ ನೀಡುವುದು)?

ಡಾ॥ಎಂ.ಹೆಚ್.ಅಂಬರೀಷ್ (ವಸತಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಮಾಲೂರು ತಾಲ್ಲೂಕಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಒಟ್ಟು 1841 ಮನೆಗಳನ್ನು ಹಂಚಿಕೆ ಮಾಡಿ, ಈ ಪೈಕಿ 407 ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಇನ್ನುಳಿದ ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಯೋಜನಾವಾರು ವಿವರ ಇಂತಿದೆ;

ಕ್ರ. ಸಂ.	ಯೋಜನೆಗಳು	ಶ್ರೇಣಿ	ಹಂಚಿಕ ಮಾಡ– ಲಾದ ಮನೆಗಳು	ನಿರ್ಮಿಸ– ಲಾದ ಮನೆಗಳು
1	ಗ್ರಾಮೀಣ ಅಂಬೇಡ್ಕರ್	2011–2012	6	0
2	ಇಂದಿರಾ ಆವಾಸ್ ಯೋಜನೆ	2011–2012	291	198

3	ಇಂದಿರಾ ಆವಾಸ್ ಯೋಜನೆ	2012–2013	298	189
4	ಇಂದಿರಾ ಆವಾಸ್ ಯೋಜನೆ	2013–2014	612	5
5	ಬಸವ ವಸತಿ ಯೋಜನೆ	2013–2014	560	15
6	ವಾಜಪೇಯಿ ನಗರ ವಸತಿ ಯೋಜನೆ	2013–2014	74	0
ಒಟ್ಟು			**1841**	**407**

ವರ್ಷವಾರು ವಿವರ **ಅನುಬಂಧ '1'** ರಲ್ಲಿ ಲಗತ್ತಿಸಿದೆ.

ಆ) ಈ ಮನೆಗಳ ನಿರ್ಮಾಣಕ್ಕೆ ₹ 661.30 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ವಿವರಗಳನ್ನು **ಅನುಬಂಧ '1'** ರಲ್ಲಿ ನೀಡಿದೆ.

ಇ) ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮತ್ತು ಸರ್ಕಾರದ ನಿಯಮಗಳನ್ವಯ ಸ್ಥಳೀಯ ಸಂಸ್ಥೆವಾರು ಗುರಿಯನ್ನು ನಿಗದಿಪಡಿಸಲಾಗುತ್ತಿದೆ. ಗುರಿಗೆ ಅನುಗುಣವಾಗಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮಸಭೆಗಳ ಮೂಲಕ ಹಾಗೂ ನಗರ ಪ್ರದೇಶಗಳಲ್ಲಿ ನಗರ ಆಶ್ರಯ ಸಮಿತಿ ಮೂಲಕ ಈ ಕೆಳಕಂಡ ಅರ್ಹತೆವುಳ್ಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ:

ಗ್ರಾಮೀಣ ವಸತಿ ಯೋಜನೆಗಳು:

ಗ್ರಾಮೀಣ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ) ಮಾಜಿ ಯೋಧರು ವಿಧುರರು, ಅಂಗವಿಕಲರು, ಹಿರಿಯನಾಗರಿಕರಾಗಿದ್ದಲ್ಲಿ ಪುರುಷರು ಸಹ ಅರ್ಹರಾಗಿರುತ್ತಾರೆ.
- ಅರ್ಜಿದಾರರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ವಾರ್ಷಿಕ ಆದಾಯವು ₹ 32,000/– ಕ್ಕಿಂತ ಕಡಿಮೆ ಇರಬೇಕು.
- ಅರ್ಜಿದಾರರು ವಸತಿ ರಹಿತ ಅಥವಾ ಗುಡಿಸಲುವಾಸಿಯಾಗಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು ಹಾಗೂ ಇನ್ನಿತರೆ ಯೋಜನೆ/ಇಲಾಖೆಯಿಂದ ವಸತಿ ಸೌಲಭ್ಯ ಪಡೆದಿರಬಾರದು.
- ಇಂದಿರಾ ಆವಾಸ್ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲು ಸರ್ವ ಕುಟುಂಬ ಸಮೀಕ್ಷೆ ಅಡಿ 30 ಅಥವಾ 30 ಅಂಕಗಳಿಗಿಂತ ಕಡಿಮೆ ಇರಬೇಕು.

ನಗರ ವಸತಿ ಯೋಜನೆ:

ನಗರ ಪ್ರದೇಶದಲ್ಲಿ, ವಾಜಪೇಯಿ ಯೋಜನೆಯಡಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

- ಅರ್ಜಿದಾರರು ಮಹಿಳಾ ಮತ್ತು ಪುರುಷ ಫಲಾನುಭವಿಗಳು ವಸತಿ ಪಡೆಯಲು ಅರ್ಹರಾಗಿರುತ್ತಾರೆ.

- ಅರ್ಜಿದಾರರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ಮಾಸಿಕ ಆದಾಯವು ₹ 7,300/– ಕ್ಕಿಂತ ಕಡಿಮೆ ಇರಬೇಕು. (ವಾರ್ಷಿಕ ₹ 87,600/– ಗಳು)
- ಅರ್ಜಿದಾರರು ವಸತಿ ರಹಿತ ಅಥವಾ ಗುಡಿಸಲುವಾಸಿಯಾಗಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು ಹಾಗೂ ಇನ್ನಿತರೆ ಯೋಜನೆ/ಇಲಾಖೆಯಿಂದ ವಸತಿ ಸೌಲಭ್ಯ ಪಡೆದಿರಬಾರದು.

Annexure-I

LAQ-2591

Sl.No.	Scheme	SeriesYear	Target	Selection	Completed	Under Progress				Unstarted	Unblocked	Blocked	Expenditure (in Lakhs)
						Foundation	Lintel	Roof	Total				
1	2	3	4	5	6	7	8	9	10	11	12	13	14
1	ಇಂದಿರಾ ಆವಾಸ್ ಯೋಜನೆ	2011-2012	497	291	198	49	15	29	93	0	0	205	119.75
2	ಗ್ರಾಮೀಣ ಅಂಬೇಡ್ಕರ್	2011-2012	6	6	0	6	0	0	6	0	0	0	0.75
3	ಇಂದಿರಾ ಆವಾಸ್ ಯೋಜನೆ	2012-2013	468	298	189	61	20	28	109	0	0	170	173.30
4	ಇಂದಿರಾ ಆವಾಸ್ ಯೋಜನೆ	2013-2014	612	612	5	231	82	47	360	247	0	0	166.80
5	ಬಸವ ವಸತಿ ಯೋಜನೆ	2013-2014	560	560	15	228	85	53	366	179	0	0	185.10
6	ವಾಜಪೇಯಿ ಸಾಧ ವಸತಿ ಯೋಜನೆ	2013-2014	75	74	0	43	3	1	47	27	0	0	15.60
GRAND TOTAL			2218	1841	407	618	205	158	981	453	0	376	661.30